Sri M. V. KRISHNAPPA.—Deputy Tahsildars are promoted as Tahsildars and vacancies of Deputy Tahsildars will be filled up by promtion. The Divisional Commissioner will have to take action.

Sri. MAHANTASWAMY.—Many officials are not benefited because of the delay in finalising seniority lists.

Sri M. V. KRISHNAPPA.—There is nothing like that. Whenever vacancies occur the Divisional Commissioner is the officer who has the power to promote Deputy Tahsildars. He will take action, unless there is something coming in the way in the shape of writs, stay orders and things like that.

Rehabilitation of Hanchinal Village in Kundgol Taluk.

*Q.—161. Sri A. J. DODDAMETI (Ron).—

Will the Government be pleased to state :—

(*a*) whether it is a fact that they are conducting investigation for the rehabilitation of Hanchinal Village, in Kundgol Taluk, Dharwar District as the said village is frequently affected by floods ;

(*b*) the time required for the completion of this investigation ?

A.—Sri M. V. KRISHNAPPA (Minister for Revenue).—

(*a*) Yes.

(*b*) The investigation has since been completed.

ಶ್ರೀ ಎ. ಜೆ. ದೊಡ್ಡಮೇಟಿ.—ಪರಿಶೀಲನೆ ಮುಕ್ತಾಯವಾಗಿದೆ ಎಂದು ಉತ್ತರದಲ್ಲಿ ಹೇಳಿದೆ. ಅದರ ವಿವರವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೇಕಾದ ಜಮೀನು ಅಕ್ವೈರ್ ಮಾಡಬೇಕೆಂದು ತೀರ್ಮಾನವಾಗಿದೆ, ಪ್ರಿಲಿಮಿನರಿ ಪಬ್ಲಿಕೇಷನ್ ಮುಂತಾದ ಕ್ರಮ ಕೈಕೊಳ್ಳಲಾಗಿವೆ. ಸಂಬಂಧಪಟ್ಟ ಜಮೀನು ಗ್ರಾಮಠಾಣಾಕ್ಕೆ ಸೇರಿವೆಯೇ ಅಥವಾ ಇನಾಂದಾರರಿಗೆ ಸೇರಿದೆಯೆ ಎಂಬುದು ಇತ್ಯರ್ಥವಾಗ ಬೇಕು. ಅದಾದಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎ. ಜೆ. ದೊಡ್ಡಮೇಟಿ.—ಯಾವ ಗ್ರಾಮಕ್ಕಾಗಿ ಅಕ್ವೈರ್ ಮಾಡುತ್ತೀರೋ ಆ ಗ್ರಾಮದಲ್ಲಿ ಜಮೀನು ದೊರೆಯದಿದ್ದರೆ ಬೇರೆ ಗ್ರಾಮದಲ್ಲಿ ಜನರಿಗೆ ತೊಂದರೆಯಾಗದಹಾಗೆ ತೆಗೆದುಕೊಂಡು ಅದಕ್ಕಾಗಿ ಬೇರೆ ಜಮೀನನ್ನು ಯಾರಿಂದ ತೆಗೆದುಕೊಂಡಿರೋ ಅವರಿಗೆ ಕೊಡುವುದು ಹೀಗೇಕೆ ಹೊಂದಿಕೆ ಮಾಡಿಕೊಳ್ಳಬಾರದು ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಸರ್ವೆ ನಂಬರು 30,31,35 ಅಕ್ವೈರ್ ಮಾಡಿಕೊಳ್ಳಬೇಕೆಂಬ ಪ್ರಪೋಸರ್ ಇದೆ. ಆದರೆ ಗ್ರಾಮಠಾಣೆಗೆ ಇನಾಂದಾರರ ಕ್ಲೈಂ ಇದೆ. ಅದು ನಮ್ಮದು ಎಂದು ಅವರು ಹೇಳುತ್ತಿದ್ದಾರೆ. ಆ ಹಕ್ಕು ಇತ್ಯರ್ಥವಾಗುವವರೆಗೆ ಯಾರದೋ ಭೂಮಿಯನ್ನು ತೆಗೆದು ಕೊಂಡು ಕೊಡುವುದಕ್ಕೆ ಅಧಿಕಾರವಿಲ್ಲ. ಇತ್ಯರ್ಥವಾದಮೇಲೆ ಬಹುತಃ ಮಾನ್ಯ ಸದಸ್ಯರು ಹೇಳಿದ ಕ್ರಮ ಅನುಸರಿಸಬಹುದು.